**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಮ್. ಎಫ್.ಸಿ ನ್ಯಾಯಾಲಯ**
**ತಿ. ನರಸಿಪುರ**
**ಸಿಸಿ ಸಂಖ್ಯೆ 3907/2022**

| | | |
|---|---|---|
| ಸಾಕ್ಷಿದಾರರ ಹೆಸರುಃ | ನಿಂಗರಾಜಮ್ಮ | ಪ್ರಮಾಣ ವಚನ ಬೋದಿಸಲಾದ |
| ಗಂಡನ ಹೆಸರುಃ | ಸಿದ್ದರಾಜು | ದಿನಾಂಕಃ09.08.2024 |
| ವಯಸ್ಸು | 39 ವರ್ಷ | |
| ವೃತ್ತಿ | ಗೃಹಿಣಿ | ಪಿ.ಡಬ್ಲ್ಯೂಃ 1 |
| ವಾಸಃ | ವಿಜಯಪುರ | ಸಿ.ಡಬ್ಲ್ಯೂಃ 1 |

ಮುಖ್ಯ ವಿಚಾರಣೆಃಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಆರೋಪಿತರು ಗೊತ್ತು. ನಮ್ಮ ಊರಿನವರು. ದಿನಾಂಕ.01.04.2021 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ 1 ರಿಂದ 3 ನೇ ಆರೋಪಿತರು ಚೆನ್ನಯ್ಯನಸ್ವಾಮಿ ದೇವಸ್ಥಾನದಲ್ಲಿ ಸೌಂಡ್ ಜಾಸ್ತಿ ಮಾಡಿ ಮೈಕ್ ಸೆಟ್ ಹಾಕಿದ್ದರು. ಆಗ ಚಾ.ಸಾ.2 ಮತ್ತು 3 ರವರು ಸದರಿ ಸ್ಥಳಕ್ಕೆ ಹೋಗಿ 1 ರಿಂದ 3 ನೇ ಆರೋಪಿತರನ್ನು ಮಕ್ಕಳು ಓದಿಕೊಳ್ಳುತ್ತಿದ್ದಾರೆ ಮೈಕ್‌ನ ಸೌಂಡ್ ಕಡಿಮೆ ಮಾಡಿ ಎಂದು ಹೇಳಿದಾಗ 1 ಮತ್ತು 2 ನೇ ಆರೋಪಿತರು ಬೋಳಿ ಮಗನೆ ಸೂಳೆ ಮಗನೆ ನಮ್ಮ ಗ್ರಾಮದಲ್ಲಿ ನಾವು ಏನಾದರೂ ಮಾಡುತ್ತೇವೆ ಎಂದು ಬಾಯಿಗೆ ಬಂದ ಹಾಗೆ ಬೈದಿರುತ್ತಾರೆ.

ನಂತರ 3 ರಿಂದ 5 ನೇ ಆರೋಪಿತರು ಚಾ.ಸಾ.2 ರವರನ್ನು ಮುಂದಕ್ಕೆ ಹೋಗದಂತೆ ತಡೆದಾಗ 1 ನೇ ಆರೋಪಿಯು ಅಲ್ಲೆ ಇದ್ದ ಕಲ್ಲಿನಿಂದ ಚಾ.ಸಾ.2 ರವರು ಬಲಕೈನ ಉಂಗುರದ ಬೆರಳಿಗೆ ಹೊಡೆದು ಜಜ್ಜಿರುತ್ತಾರೆ. ನಂತರ 2 ನೇ ಆರೋಪಿಯು ಚಾ.ಸಾ.2 ರವರ ತಲೆಗೆ ಹೊಡೆದಿದ್ದು, ನಂತರ 6 ನೇ ಆರೋಪಿಯು ದೊಣ್ಣೆ ಯಿಂದ ಚಾ.ಸಾ.2 ರವರ ಮೈ ಕೈ ಗೆ ಹೊಡೆದಿರುತ್ತಾರೆ. ಆಗ ಚಾ.ಸಾ,3 ರವರು ಜಗಳ ಬಿಡಿಸಲು ಹೋದಾಗ ಪ್ರದೀಪ, ಅಭಿ ಯವರು ಚಾ.ಸಾ.3 ರವರನ್ನು ಮುಂದೆ ಹೋಗದಂತೆ ತಬ್ಬಿ ಹಿಡಿದಿದ್ದಾಗ ನವೀನ ಎಂಬುವವರು ಚಪ್ಪಲಿಯಿಂದ ಚಾ.ಸಾ.3 ರವರಿಗೆ ಹೊಡೆದಿರುತ್ತಾರೆ. ಆಗ ನಾನು ಜಗಳ

ಬಿಡಿಸಲು ಹೋದಾಗ ತುಳಸಮ್ಮ ಮತ್ತು ರಾಜಮ್ಮ ರವರು ಬಾಯಿಗೆ ಬಂದ ಹಾಗೆ ಅವಾಚ್ಯ ಶಬ್ದಗಳಿಂದ ಬೈಯ್ದಿದ್ದುರುತ್ತಾರೆ. ನಂತರ ಗುಂಡಮ್ಮ ಎಂಬುವವರು ನನ್ನ ತಲೆಯ ಜುಟ್ಟನ್ನು ಹಿಡಿದು ಎಳೆದಾಡಿ ಚಪ್ಪಲಿಯಿಂದ ನನ್ನ ಮೈ ಕೈ ಗೆ ಹೊಡೆದಿರುತ್ತಾರೆ. ಆಗ ಸ್ಥಳದಲ್ಲಿದ್ದ ಚಾ.ಸಾ.4 ಮತ್ತು 5 ರವರು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ 1 ರಿಂದ 6 ನೇ ಆರೋಪಿತರು, ಪ್ರದೀಪ, ಅಭಿ ಮತ್ತು ನವೀನ ರವರು ನನಗೆ, ಚಾ.ಸಾ.2 ಮತ್ತು 3 ರವರನ್ನು ನಿಮ್ಮನ್ನು ಬಿಡುವುದಿಲ್ಲ ಯಾವತ್ತಿದ್ದರೂ ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿದ್ದರು. ನಂತರ ಚಾ.ಸಾ.2 ರವರಿಗೆ ತೀರ್ವ ರಕ್ತ ಗಾಯವಾಗಿ ಸ್ಥಳದಲ್ಲಿ ಪ್ರಜ್ಞೆ ತಪ್ಪಿ ಬಿದ್ದಿರುತ್ತಾರೆ. ನಂತರ ಚಾ.ಸಾ. 2 ರವರನ್ನು ನಾನು ಮತ್ತು ಚಾ.ಸಾ.3 ರವರು ಆಟೋದಲ್ಲಿ ಟಿ.ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ವೈದ್ಯರ ಸಲಹೆ ಮೇರೆಗೆ ಮೈಸೂರಿಗೆ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಮರುದಿನ ತಲಕಾಡು ಪೋಲೀಸ್ ಠಾಣೆಗೆ ಹೋಗಿ ಆರೋಪಿತರಿಂದ ದೂರನ್ನು ನೀಡಿರುತ್ತೇನೆ. ಸಾಕ್ಷಿದಾರರು ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

2. ನಂತರ ಮರುದಿನ ದಿನಾಂಕ.03.04.2022 ರಂದು ತಲಕಾಡು ಪೋಲೀಸರು ಗಲಾಟೆಯಾದ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾ.ಸಾ.6 ಮತ್ತು 7 ರ ಸಮಕ್ಷಮ ಮದ್ಯಾಹ್ನ 1.00 ಗಂಟೆಯಿಂದ 1.40 ರವರೆಗೆ ಪಂಚನಾಮೆ ಜರುಗಿಸಿ ಎರಡು ದೊಣ್ಣೆಗಳನ್ನು, ಎರಡು ಚಪ್ಪಲಿಗಳನ್ನು ಮತ್ತು ಒಂದು ಕಲ್ಲನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನಾನು, ಚಾ.ಸಾ.6 ಮತ್ತು 7 ರವರು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ದಿನಾಂಕ.03.04.2022 ರ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ

ಗುರುತಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ ಕಲ್ಲನ್ನು ನೋಡಿ ಗುರುತಿಸಿದ್ದರಿಂದ ಸದರಿ ಕಲ್ಲನ್ನು ಮು.ಮಾ.1 ಎಂದು, ಎರಡು ದೊಣ್ಣೆ ಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಮು.ಮಾ.2 ಮತ್ತು 3 ಎಂದು, ಎರಡು ಚಪ್ಪಲಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಮು.ಮಾ.4 ಮತ್ತು 5 ಎಂದು ಗುರುತಿಸಲಾಯಿತು.

3. ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿದಾರರು ನ್ಯಾಯಾಲಯದ ಮುಂದಿರುವ 1 ರಿಂದ 6 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತೇನೆ.)

ಓ.ಹೇ.ಕೇ.ಸ. ಇದೆ.,

ಹೆಚ್ಚುವರಿ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ, ತಿ. ನರಸಿಪುರ